## ಈ ಲೇಖನದ ವಿಷಯಾನುಕ್ರಮಣಿಕೆ


**ವೈಷ್ಣವರ ಶಿವರಾತ್ರಿಯ ಆಚರಣೆಯ ಕ್ರಮ** 2

**ಶಿವರಾತ್ರಿ ಎಂದರೇನು?** 3

**ಎಂದು ಆಚರಿಸಬೇಕು?** 4

ಶಿವರಾತ್ರಿಗೆ ಅರ್ಧರಾತ್ರಿ, ಪ್ರದೋಷ ಎರಡೂ ಬೇಕು 4

ಶಿವರಾತ್ರಿಗೆ ಪ್ರದೋಷಕ್ಕಿಂತಲೂ ಅರ್ಧರಾತ್ರಿ ಶ್ರೇಷ್ಠ 5

ಈ ಯೋಗ ಎರಡು ದಿವಸ ಇದ್ದಾಗ 9

ಅರ್ಧರಾತ್ರಿಯಲ್ಲಿ ಚತುರ್ದಶಿ ಇಲ್ಲದೇ ಇದ್ದಾಗ 10

**ವೈಷ್ಣವರು ಶಿವರಾತ್ರಿಯನ್ನು ಆಚರಿಸುವ ಕ್ರಮ** 12

ಪೂಜೆ 12

ಪಾರಾಯಣ 13

ಭೋಜನ 13

ಭಜನೆ 14

ಶಿವಸ್ಮರಣೆ, ಶಿವದರ್ಶನ 14

ಮಾಹಾತ್ಮ್ಯಶ್ರವಣ 15

ನಮಸ್ಕಾರ 16

**ಶಿವಮಾಹಾತ್ಮ್ಯದ ಉಪನ್ಯಾಸಗಳ ಲಿಂಕುಗಳು** 18

ಗಿರಿಜಾಕಲ್ಯಾಣ 18

ತ್ರಿಪುರಾಸುರ ಸಂಹಾರ 24

ಶಿವಸ್ತುತಿ 27

## ವೈಷ್ಣವರ ಶಿವರಾತ್ರಿಯ ಆಚರಣೆಯ ಕ್ರಮ

ಮಾಘ ಮಾಸದ ಕೃಷ್ಣಪಕ್ಷದ ಚತುರ್ದಶಿಯಂದು ಶಿವರಾತ್ರಿಯ ಆಚರಣೆ.

ಶ್ರೀ ವಿಜಯೀಂದ್ರತೀರ್ಥಗುರುಸಾರ್ವಭೌಮರ ತಮ್ಮನ ಮೊಮ್ಮಕ್ಕಳಾದ, ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ ಶ್ರೇಷ್ಠ ಶಿಷ್ಯರಾದ ಶ್ರೀ ಕೃಷ್ಣಾಚಾರ್ಯರು ಸ್ಮೃತಿಮುಕ್ತಾವಲಿಯಲ್ಲಿ ಶಿವರಾತ್ರಿಯ ಕುರಿತ ವಿವರವನ್ನು ವಿಸ್ತಾರವಾಗಿ ನೀಡಿದ್ದಾರೆ.

ಆ ಮಹಾನುಭಾವರ ಪಾದಸ್ಮರಣೆಯನ್ನು ಮಾಡಿ ಅಲ್ಲಿನ ವಿಷಯಗಳನ್ನು ತಿಳಿಯುವ ಪ್ರಯತ್ನ ಮಾಡೋಣ.

## ಶಿವರಾತ್ರಿ ಎಂದರೇನು?

ಈ ಪ್ರಶ್ನೆಗೆ ನಾರದೀಯಸಂಹಿತೆಯಲ್ಲಿ ಉತ್ತರವಿದೆ.

**ಮಾಘಕೃಷ್ಣಚತುರ್ದಶ್ಯಾಂ**
**ಆದಿದೇವೋ ಮಹಾನಿಶಿ ।**
**ಶಿವಲಿಂಗತಯೋದ್ಭೂತಃ**
**ಕೋಟಿಸೂರ್ಯಸಮಪ್ರಭಃ ।**
**ಶಿವರಾತ್ರಿವ್ರತಂ ತತ್ರ**
**ಸೋಽಶ್ವಮೇಧಫಲಂ ಲಭೇತ್ ॥**

ರುದ್ರದೇವರು ಮೊಟ್ಟ ಮೊದಲ ಬಾರಿಗೆ ಲಿಂಗದ ರೂಪದಲ್ಲಿ ಪ್ರಕಟರಾದದ್ದು ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿಯ ಮಧ್ಯರಾತ್ರಿಯಲ್ಲಿ.

ಅ ಕಗ್ಗತ್ತಲೆಯ ಅರ್ಧರಾತ್ರಿಯಲ್ಲಿ ರುದ್ರದೇವರು ಕೋಟಿಸೂರ್ಯರಿಗೆ ಸಮವಾದ ಪ್ರಭೆಯಿಂದ ಲಿಂಗದ ರೂಪದಲ್ಲಿ ಪ್ರಾದುರ್ಭವಿಸಿದ ಕಾರಣ ಈ ದಿವಸಕ್ಕೆ **ಶಿವರಾತ್ರಿ** ಎಂದು ಹೆಸರಿದೆ.

## ಎಂದು ಆಚರಿಸಬೇಕು?

ಸಾಮಾನ್ಯವಾಗಿ ಎಲ್ಲ ವ್ರತಗಳಿಗೂ ನಿರ್ದಿಷ್ಟವಾದ ತಿಥಿ ಮತ್ತು ಕಾಲಗಳಿರುತ್ತವೆ. ಆ ಕಾಲದಲ್ಲಿ ಆ ತಿಥಿ ಬಂದಾಗ ಮಾತ್ರ ಆ ವ್ರತದ ಆಚರಣೆಯನ್ನು ಮಾಡಬೇಕು.

## ಶಿವರಾತ್ರಿಗೆ ಅರ್ಧರಾತ್ರಿ, ಪ್ರದೋಷ ಎರಡೂ ಬೇಕು

ಶಿವರಾತ್ರಿಗೆ ಪ್ರಧಾನವಾದದ್ದು ಎರಡು ಕಾಲ. ಒಂದು ಮಧ್ಯರಾತ್ರಿ. ಕಾರಣ ಮಧ್ಯರಾತ್ರಿಯಲ್ಲಿಯೇ ಶಿವಲಿಂಗದ ರೂಪದ್ಲಲಿ ರುದ್ರದೇವರು ಪ್ರಕಟಗೊಂಡಿದ್ದು.

ಎರಡನೆಯ ಕಾಲ ಪ್ರದೋಷ. ಸಂಸ್ಕೃತದಲ್ಲಿ ದೋಷಾ ಎಂದರೆ ರಾತ್ರಿ. ಯಾವ ಸಮಯದಲ್ಲಿ ರಾತ್ರಿಯು ಆರಂಭವಾಗುತ್ತದೆಯೋ ಅದು ಪ್ರದೋಷಕಾಲ. ಸೂರ್ಯಾಸ್ತವಾದ ಬಳಿಕ ಎರಡು ಗಳಿಗೆ ಪ್ರದೋಷಕಾಲ ಎಂದು ಕರೆಸಿಕೊಳ್ಳುತ್ತದೆ.

**“ಪ್ರದೋಷೋಽಸ್ತಮಯಾದೂರ್ಧ್ವಂ ಘಟಿಕಾದ್ವಯಮಿಷ್ಯತೇ”.**

ರುದ್ರದೇವರಿಗೆ ಅತ್ಯಂತ ಪ್ರಿಯವಾದ ಕಾಲವಿದು.

ಈ ಸಂದರ್ಭದಲ್ಲಿ ಎತ್ತಿನ ಮೇಲೆ ಪಾರ್ವತಿಯ ಜೊತೆಯಲ್ಲಿ ಕುಳಿತ ರುದ್ರದೇವರು ಸಂಚಾರ ಮಾಡುತ್ತಿರುತ್ತಾರೆ. ಈ ಕಾಲದಲ್ಲಿ ಹರಿಸ್ಮರಣೆ, ಭಜನೆಗಳನ್ನು ಮಾತ್ರ ಮಾಡಬೇಕು. ಅಧ್ಯಯನ, ಭೋಜನ, ನಿದ್ರೆ ಮುಂತಾದವನ್ನು ಸರ್ವಥಾ ಮಾಡಬಾರದು.

## ಶಿವರಾತ್ರಿಗೆ ಪ್ರದೋಷಕ್ಕಿಂತಲೂ ಅರ್ಧರಾತ್ರಿ ಶ್ರೇಷ್ಠ

ಪ್ರದೋಷಕಾಲ ರುದ್ರದೇವರಿಗೆ ಪ್ರಿಯವಾದ್ದರಿಂದ ಪ್ರದೋಷಕಾಲದಲ್ಲಿ ಚತುರ್ದಶಿ ಇದ್ದರೆ ಪ್ರಶಸ್ತ. ಆದರೆ, ಪ್ರದೋಷಕ್ಕಿಂತಲೂ ಅರ್ಧರಾತ್ರವ್ಯಾಪಿನಿಯಾದ ಚತುರ್ದಶಿಯೇ ಶ್ರೇಷ್ಠ. ಕಾರಣ, ಶಿವರಾತ್ರಿಯ ಆಚರಣೆಗೆ ಕಾರಣವಾದ ಲಿಂಗದ ಪ್ರಾದುರ್ಭಾವವಾದದ್ದು ಇದೇ ಸಮಯದಲ್ಲಿ.

ಅರ್ಧರಾತ್ರಿಯಲ್ಲಿ ಚತುರ್ದಶಿ ಇದ್ದಾಗಲೇ ಶಿವರಾತ್ರಿಯನ್ನು ಆಚರಿಸಬೇಕು ಎನ್ನುವದಕ್ಕೆ ಸ್ಕಂದ ಪುರಾಣ ಮತ್ತೊಂದು ಕಾರಣವನ್ನು ನೀಡುತ್ತದೆ —

**ನಿಶಿ ಭ್ರಮಂತಿ ಭೂತಾನಿ**
**ಶಕ್ತಯಃ ಶೂಲಭೃದ್ ಯತಃ ।**
**ಅತಸ್ತಸ್ಯಾಂ ಚತುರ್ದಶ್ಯಾಂ**
**ಸತ್ಯಾಂ ತತ್ಪೂಜನಂ ಭವೇತ್ ॥**

ರಾತ್ರಿಯ ಹೊತ್ತಿನಲ್ಲಿಯೇ ಶಿವನ ಭೃತ್ಯರಾದ ಭೂತಗಣಗಳ ಸಂಚಾರ. ಹೀಗಾಗಿ ಶಿವಪ್ರಿಯರು ಓಡಾಡುವ ಅರ್ಧರಾತ್ರಿಯಲ್ಲಿಯೇ ಚತುರ್ದಶಿ ಇರಬೇಕು. ಆ ದಿವಸವೇ ಶಿವರಾತ್ರಿಯನ್ನು ಆಚರಿಸಬೇಕು.

ಹೀಗೆ ಶಿವರಾತ್ರಿಯ ತಿಥಿಯಾದ ಮಾಘ ಕೃಷ್ಣ ಚತುರ್ದಶಿ[1]ಯು ಪ್ರದೋಷ ಮತ್ತು ಅರ್ಧರಾತ್ರಿಯಲ್ಲಿದ್ದಾಗ ಶಿವರಾತ್ರಿವ್ರತವನ್ನು ಆಚರಿಸಬೇಕು ಎಂದು ನಾರದೀಯ ಸಂಹಿತೆ ತಿಳಿಸುತ್ತದೆ.

**ಅರ್ಧರಾತ್ರಯುತಾ ಯತ್ರ**
**ಮಾಘಕೃಷ್ಣಚತುರ್ದಶೀ**
**ಶಿವರಾತ್ರಿವ್ರತಂ ತತ್ರ**
**ಸೋಽಶ್ವಮೇಧಫಲಂ ಲಭೇತ್ ||**

ಪ್ರದೋಷ-ಅರ್ಧರಾತ್ರಿವ್ಯಾಪಿನಿಯಾದ ಶಿವರಾತ್ರಿಯಲ್ಲಿ ಶಿವನನ್ನು ಆರಾಧಿಸುವದರಿಂದ ಅಶ್ವಮೇಧದ ಫಲ ಒದಗಿ ಬರುತ್ತದೆ.

---

[1] ಕೆಲವು ಪುರಾಣಗಳಲ್ಲಿ ಫಾಲ್ಗುನ ಕೃಷ್ಣ ಚತುರ್ದಶಿ ಎಂದೂ ಉಲ್ಲೇಖ ಗೊಂಡಿದೆ. ಬನ್ನಂಜೆ ಹೇಳುವಂತೆ ಇದು ಪುರಾಣೇಕರ ಗೊಂದಲ ಸರ್ವಥಾ ಅಲ್ಲ. ಯಾವ ಕೃಷ್ಣಪಕ್ಷವನ್ನು ಮಾಘ-ಕೃಷ್ಣ ಮತ್ತು ಫಾಲ್ಗುನ ಕೃಷ್ಣ ಎಂದು ಎರಡೂ ಶಬ್ದಗಳಿಂದ ವ್ಯವಹರಿಸಬಹುದೋ ಆ ಕೃಷ್ಣ ಪಕ್ಷದಲ್ಲಿ ಶಿವರಾತ್ರಿ ಎಂದರ್ಥ. ಅಮಾವಾಸ್ಯೆಗೆ ತಿಂಗಳು ಅಂತ್ಯ ಎಂದು ಲೆಕ್ಕ ಇಟ್ಟುಕೊಂಡಾಗ ಇದು ಮಾಘ ಕೃಷ್ಣ. ಪೂರ್ಣಿಮೆಗೆ ಮಾಸ ಅಂತ್ಯ ವಾಗುತ್ತದೆ ಎಂದಿಟ್ಟುಕೊಂಡಾಗ, ಮಾಘ ಕೃಷ್ಣವೇ ಫಾಲ್ಗುನ ಕೃಷ್ಣ. ಬನ್ನಂಜೆ ವಿಮರ್ಶ ಪುಸ್ತಕದಲ್ಲಿ ವಿವರವಾಗಿ ತಿಳಿಸಿದ್ದೇನೆ. Link — VNA084

ಶಿವರಾತ್ರಿಯನ್ನು ಆಚರಿಸಬೇಕಾದರೆ ಒಟ್ಟಾರೆ ತಿಥಿಗಳು ಹೇಗಿರಬೇಕು ಎನ್ನುವದನ್ನು ಶ್ರೀ ಕೃಷ್ಣಾಚಾರ್ಯರು ಶಿವಪುರಾಣದ ವಚನಗಳಿಂದ ನಿಸ್ಸಂದಿಗ್ಧವಾಗಿ ನಿರ್ಣಯಿಸಿದ್ದಾರೆ —

**ಪ್ರದೋಷೇ ವಾ ನಿಶೀಥೇ ವಾ**
**ದ್ವಯೋರ್ವಾ ಯಾಸ್ತಿ ಸಾ ಭವೇತ್ ।**
**ಶಿವರಾತ್ರಿವ್ರತೇ ತಸ್ಯ**
**ದ್ವಯೋಃ ಸತ್ತಾ ಪ್ರಶಸ್ಯತೇ ।।**

**ತದಭಾವೇ ನಿಶೀಥೈಕ-**
**ವ್ಯಾಪಿನೀ ಪರಿಗೃಹ್ಯತಾಮ್ ।**
**ಅರ್ಧರಾತ್ರದ್ವಯೇ ಸಾ ಚೇತ್**
**ಪೂರ್ವಾ ತ್ಯಾಜ್ಯಾ ಪರಾ ಶುಭಾ ।।**

**ದ್ವಯೋಶ್ಚಾಸಂಭವೇ ಗ್ರಾಹ್ಯಾ**
**ಪ್ರದೋಷವ್ಯಾಪಿನೀ ತಿಥಿಃ ।**

ಚತುರ್ದಶಿಯ ಎಷ್ಟು ರೀತಿಯಲ್ಲಿ ಬರುತ್ತದೆಯೋ ಅಷ್ಟೂ ಸಂದರ್ಭಗಳಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಶಾಸ್ತ್ರ ತಿಳಿಸುತ್ತದೆ.

ಚತುರ್ದಶಿಯು ಪ್ರದೋಷಕಾಲದಲ್ಲಿಯೂ, ರಾತ್ರಿಕಾಲದಲ್ಲಿಯೂ ವ್ಯಾಪಿಸಿದ್ದರೆ ಅತ್ಯಂತ ಪ್ರಶಸ್ತ. ಶಿವರಾತ್ರಿಗೆ ಅರ್ಧರಾತ್ರಿಯೂ ಬೇಕು, ಪ್ರದೋಷವೂ ಬೇಕು.

## ಈ ಯೋಗ ಎರಡು ದಿವಸ ಇದ್ದಾಗ

ಕೆಲವು ಬಾರಿ ಎರಡು ದಿವಸಗಳಲ್ಲಿ ಪ್ರದೋಷದಲ್ಲಿಯೂ ಇರುತ್ತದೆ, ರಾತ್ರಿಯಲ್ಲಿಯೂ ಇರುತ್ತದೆ. ಆಗ ತ್ರಯೋದಶಿವಿದ್ಧವಾದ ಶಿವರಾತ್ರಿಯನ್ನು ಆಚರಿಸಬೇಕು. ಅಂದರೆ ಮೊದಲ ದಿವಸ ಶಿವರಾತ್ರಿಯನ್ನು ಆಚರಿಸಬೇಕು — **ಚತುರ್ದಶೀ ಭೂತವಿದ್ಧಾ ಶಿವರಾತ್ರಿವ್ರತಂ ಚರೇತ್.**

ಕೆಲವು ಬಾರಿ ಮೊದಲನೆಯ ದಿವಸ ಪ್ರದೋಷದಲ್ಲಿರುವದಿಲ್ಲ. ಆದರೆ ಅರ್ಧರಾತ್ರಿ-ಯಲ್ಲಿರುತ್ತದೆ. ಎರಡನೆಯ ದಿವಸ ಪ್ರದೋಷದಲ್ಲಿಯೂ ಚತುರ್ದಶಿ ಇರುತ್ತದೆ. ಅರ್ಧರಾತ್ರಿಯಲ್ಲಿಯೂ ಚತುರ್ದಶಿ ಇರುತ್ತದೆ. ಆಗ

ಎರಡನೆಯ ದಿವಸವನ್ನು ಗ್ರಹಿಸಬೇಕು. ಈ ಮಾತನ್ನು ಶಿವಪುರಾಣ ಹೇಳುತ್ತದೆ — **ದರ್ಶವಿದ್ಧಾ ಪ್ರಶಸ್ಯತೇ**.

## ಅರ್ಧರಾತ್ರಿಯಲ್ಲಿ ಚತುರ್ದಶಿ ಇಲ್ಲದೇ ಇದ್ದಾಗ

ಕೆಲವು ಸಂದರ್ಭದಲ್ಲಿ ಎರಡೂ ದಿವಸ ಅರ್ಧರಾತ್ರಿಯಲ್ಲಿ ದೊರೆಯುವದೇ ಇಲ್ಲ. ಬೆಳಗಿನ ಜಾವದಲ್ಲಿ ಚತುರ್ದಶಿ ಆರಂಭವಾಗಿ ರಾತ್ರಿ ಹತ್ತು ಗಂಟೆಯ ಸುಮಾರಿಗೆ ಮುಗಿದು ಹೋಗುತ್ತದೆ ಎಂದಿಟ್ಟುಕೊಳ್ಳಿ. ಆಗ ಪ್ರದೋಷವ್ಯಾಪಿನಿಯಾದ ಚತುರ್ದಶಿಯನ್ನೇ ಗ್ರಹಿಸಬೇಕು.
**“ದ್ವಯೋಃಶ್ಚಾಸಂಭವೇ ಗ್ರಾಹ್ಯಾ ಪ್ರದೋಷವ್ಯಾಪಿನೀ ತಿಥಿಃ”**

ಎರಡೂ ದಿವಸದ ಪ್ರದೋಷ ಅರ್ಧರಾತ್ರಿಗಳಲ್ಲಿ ಚತುರ್ದಶಿ ಇದ್ದರೆ, ಮೊದಲನೆಯ ದಿವಸವೇ ಶಿವರಾತ್ರಿ.

ಮೊದಲನೆಯ ದಿವಸ ಪ್ರದೋಷ ಮತ್ತು ಅರ್ಧರಾತ್ರಿಯಲ್ಲಿದ್ದು ಎರಡನೆಯ ದಿವಸ

ಪ್ರದೋಷದಲ್ಲಿ ಮಾತ್ರ ಇದ್ದರೆ ಮೊದಲನೆಯ ದಿವಸವೇ ಶಿವರಾತ್ರಿ.

ಎರಡೂ ದಿವಸಗಳಲ್ಲಿ ಪ್ರದೋಷದಲ್ಲಿಲ್ಲ. ಆದರೆ ಮೊದಲನೆಯ ದಿವಸ ಅರ್ಧರಾತ್ರಿಯಲ್ಲಿದೆ, ಎರಡನೆಯ ದಿವಸ ಹಗಲಿನಲ್ಲಿ ಮಾತ್ರ ಚತುರ್ದಶಿ ಇದೆ ಎಂದಾದಲ್ಲಿ ಮೊದಲನೆಯ ದಿವಸವೇ ಶಿವರಾತ್ರಿ.

ಮೊದಲನೆಯ ದಿವಸ ಅರ್ಧರಾತ್ರಿಯಲ್ಲಿ ಮಾತ್ರ ಇದ್ದು ಎರಡನೆಯ ದಿವಸ ಪ್ರದೋಷ ಅರ್ಧರಾತ್ರಿಯಲ್ಲಿ ಚತುರ್ದಶಿ ಇದ್ದರೆ ಎರಡನೆಯ ದಿವಸವೇ ಶಿವರಾತ್ರಿ.

ಎರಡೂ ದಿವಸಗಳಲ್ಲಿ ಅರ್ಧರಾತ್ರಿಯಿಲ್ಲದಿದ್ದರೆ, ಯಾವ ದಿವಸದ ಪ್ರದೋಷದಲ್ಲಿರುತ್ತದೆಯೋ ಆ ದಿವಸವೇ ಶಿವರಾತ್ರಿ.

ಹೀಗೆ ಸಂಶಯಕ್ಕೆಣೆಯಿಲ್ಲದಂತೆ ಶಾಸ್ತ್ರ ಸ್ಪಷ್ಟವಾಗಿ ತಿಳಿಸಿದೆ.

## ವೈಷ್ಣವರು ಶಿವರಾತ್ರಿಯನ್ನು ಆಚರಿಸುವ ಕ್ರಮ

ಶಿವರಾತ್ರಿಯಲ್ಲಿ ಉಪವಾಸ ಮತ್ತು ಜಾಗರಣೆಯ ನಿಯಮ ಶಿವನನ್ನು ಸರ್ವೋತ್ತಮ ದೇವತೆ ಎಂದು ಒಪ್ಪುವ ಪಾಶುಪತರಿಗೆ ಅರ್ಥಾತ್ ಶೈವರಿಗೆ ಮಾತ್ರ.

ಶ್ರೀಹರಿಯೇ ಪರಬ್ರಹ್ಮ ಎಂದು ಒಪ್ಪುವ ವೈದಿಕರಿಗೆ ಶಿವರಾತ್ರಿಯಂದು ಹಬ್ಬದ ಆಚರಣೆ. ಆ ದಿವಸ ವಿಶೇಷ ಅನ್ನಸಂತರ್ಪಣೆಯನ್ನು ಮಾಡಬೇಕು.

## ಪೂಜೆ

ಬೆಳಿಗ್ಗೆ ದೇವರ ಪೂಜೆ ಮುಗಿದ ಬಳಿಕ ರುದ್ರದೇವರ ಲಿಂಗಕ್ಕೆ ಅಥವಾ ಪ್ರತಿಮೆಗೆ[2] ರುದ್ರಪ್ರಶ್ನ, ಚಮಕಪ್ರಶ್ನಗಳ ಪಾರಾಯಣವನ್ನು ಮಾಡುತ್ತ ಅಭಿಷೇಕವನ್ನು ಮಾಡಬೇಕು. ಬಿಲ್ವಪತ್ರಗಳಿಂದ ಅರ್ಚನೆಯನ್ನು ಮಾಡಬೇಕು.

---

[2] ರುದ್ರದೇವರ ಪ್ರತಿಮೆಗೂ ಅವಶ್ಯವಾಗಿ ಪೂಜೆ ಮಾಡಬಹುದು. ಲಿಂಗದ ಪೂಜೆ ಶ್ರೇಷ್ಠವಾದದ್ದು. ಆದರೆ ಪ್ರತಿಮೆಯ ಪೂಜೆ ನಿಷಿದ್ಧವಲ್ಲ. ಆಚಾರ್ಯರು ತಂತ್ರಸಾರದಲ್ಲಿ ತಿಳಿಸಿರುವಂತೆ ಪಂಚಮುಖಿ ಅಥವಾ ಏಕಮುಖಿ ಶಿವನ ಪ್ರತಿಮೆಯನ್ನು ಅವಶ್ಯವಾಗಿ ಪೂಜಿಸಬಹುದು.

ಆ ನಂತರ ಒಂದು ಪ್ರತ್ಯೇಕ ಎಲೆಯಲ್ಲಿ ಎಲ್ಲ ಹಬ್ಬದ ಅಡುಗೆಯನ್ನೂ ಬಡಿಸಿ ನೈವೇದ್ಯವನ್ನು ಮಾಡಬೇಕು. ರುದ್ರದೇವರಿಗೆ ನಿವೇದಿಸಿದ ಪದಾರ್ಥಗಳನ್ನು ಗೋವುಗಳಿಗೆ ನೀಡಬೇಕು. ಉಣ್ಣಬಾರದು.

## ಪಾರಾಯಣ

ಆ ನಂತರ ಶ್ರೀ ನಾರಾಯಣಪಂಡಿತಾಚಾರ್ಯರು, ಶ್ರೀಮಚ್ಚಂದ್ರಿಕಾಚಾರ್ಯರು ಮುಂತಾದ ಮಹಾನುಭಾವರು ರಚಿಸಿರುವ ಶಿವಸ್ತುತಿಗಳ ಪಾರಾಯಣವನ್ನು ಮಾಡಬೇಕು. ಅದರ ಅರ್ಥಾನುಸಂಧಾನವನ್ನು ಮಾಡಬೇಕು.

## ಭೋಜನ

ಆ ಬಳಿಕ ವಿಷ್ಣುಭಕ್ತರಾದ ಸಜ್ಜನರಿಗೆ ಅನ್ನದಾನವನ್ನು ಮಾಡಿ ತಾನು ಊಟ ಮಾಡಬೇಕು. ವಿಶೇಷವಾಗಿ ಈ ದಿವಸ ಬೇಳೆಯ ಹೋಳಿಗೆ ಮತ್ತು ಕಡಲೇಬೇಳೆಯ ಆಂಬೋಡೆಯನ್ನು ಮಾಡುವದು ಪದ್ಧತಿ.

## ಭಜನೆ

ನಮ್ಮ ಹರಿದಾಸ ಸಾಹಿತ್ಯದಲ್ಲಿ ರುದ್ರದೇವರ ಕುರಿತಾದ ನೂರಾರು ಹಾಡುಗಳು ಉಪಲಬ್ಧವಿವೆ. ಆ ಹಾಡುಗಳನ್ನು ಸಂಜೆಯ ಹೊತ್ತಿನಲ್ಲಿ ಹಾಡಬೇಕು.

ಸೂರ್ಯಾಸ್ತವಾದ ಬಳಿಕ 48 ನಿಮಿಷ ರುದ್ರದೇವರಿಗೆ ಅತ್ಯಂತ ಪ್ರಿಯವಾದ ಪ್ರದೋಷಕಾಲವಾದ್ದರಿಂದ ಆ ಸಮಯದಲ್ಲಿ ರುದ್ರ, ಚಮಕ, ಶಿವಸ್ತೋತ್ರಗಳ ಪಾರಾಯಣ, ಹಾಡುಗಳ ಭಜನೆಯನ್ನು ಮಾಡತಕ್ಕದ್ದು.

## ಶಿವಸ್ಮರಣೆ, ಶಿವದರ್ಶನ

ಹತ್ತಿರದಲ್ಲಿ ರುದ್ರದೇವರ ಸನ್ನಿಧಾನವಿರುವ ಪ್ರಾಚೀನ ಗುಡಿಯಿದ್ದಲ್ಲಿ ಅವಶ್ಯವಾಗಿ ದರ್ಶನ ಮಾಡಿಬರಬೇಕು.

ಕಾಶಿಯ ವಿಶ್ವನಾಥ, ಪ್ರಭಾಸದ ಸೋಮನಾಥ, ಶ್ರೀಶೈಲದ ಮಲ್ಲಿಕಾರ್ಜುನ, ರಾಮೇಶ್ವರದ

ರಾಮನಾಥ, ಗೋಕರ್ಣದ ಆತ್ಮಲಿಂಗ, ಉಡುಪಿಯ ಚಂದ್ರಮೌಳೀಶ್ವರ, ಗರಳಪುರಿಯ ಶ್ರೀಕಂಠೇಶ್ವರ, ಹಂಪೆಯ ವಿರೂಪಾಕ್ಷ ಮುಂತಾದ ಮಹಾಸನ್ನಿಧಾನದ  ಲಿಂಗಗಳ ಸ್ಮರಣೆಯನ್ನು ಮಾಡತಕ್ಕದ್ದು.

ಶ್ರೀಮಚ್ಚಂದ್ರಿಕಾಚಾರ್ಯರು ಪೂಜಿಸಿರುವ ಸ್ಫಟಿಕಲಿಂಗ, ಶ್ರೀಮದ್ವಾದಿರಾಜರು ಪ್ರತಿಷ್ಠಾಪಿಸಿರುವ ಧರ್ಮಸ್ಥಳದ ಮಂಜುನಾಥ, ಧವಳಗಂಗೆಯ ಗಂಗಾಧರ ಮುಂತಾದ ರುದ್ರದೇವರ ದಿವ್ಯಪ್ರತೀಕಗಳ ಸ್ಮರಣೆಯನ್ನು ಮಾಡತಕ್ಕದ್ದು.

## ಮಾಹಾತ್ಮ್ಯಶ್ರವಣ

ರುದ್ರದೇವರ ಮಾಹಾತ್ಮ್ಯವುಳ್ಳ, ಗಿರಿಜಾಕಲ್ಯಾಣ, ತ್ರಿಪುರಾಸುರ ಸಂಹಾರ, ದಕ್ಷಯಜ್ಞವಿಧ್ವಂಸನ, ಮಾರ್ಕಂಡೇಯಸಂರಕ್ಷಣ, ಬಾಣಾಸುರಸಂರಕ್ಷಣ ಮುಂತಾದ ಮಹಾಮಾಹಾತ್ಮ್ಯಗಳನ್ನು, ಸ್ವಯಂ ಭಗವಂತ ರಾಮ-ಕೃಷ್ಣಾದಿ ರೂಪಗಳಲ್ಲಿ ಅಸುರಜನಮೋಹಕ್ಕಾಗಿ ಶಿವನನ್ನು ಆರಾಧಿಸಿದ

ಪವಿತ್ರ ಪ್ರಸಂಗಗಳ ಚರಿತ್ರೆಯನ್ನು ಇಡಿಯ ದಿವಸದಲ್ಲಿ ಕೇಳಬೇಕು.

## ನಮಸ್ಕಾರ

ಆ ನಂತರ ರಾತ್ರಿಯಲ್ಲಿ ಊಟವನ್ನು ಮುಗಿಸಿ ಮಧ್ಯರಾತ್ರಿಯವರೆಗೆ ಎಷ್ಟು ಸಾಧ್ಯವೋ ಅಷ್ಟು ನಮಸ್ಕಾರಗಳನ್ನು ರುದ್ರದೇವರಿಗೆ ಸಲ್ಲಿಸತಕ್ಕದ್ದು.

ರಾತ್ರಿ ಬೇಗನೆ ಮಲಗಿದ್ದರೆ ಮಧ್ಯರಾತ್ರಿಯ ಸಮಯಕ್ಕೆ ಎದ್ದು ರುದ್ರದೇವರ ಮೇಲಿನ ರೂಪಗಳನ್ನು ಚಿಂತಿಸುತ್ತ, ಒಂದು ಹಾಡು, ಅಥವಾ ಸ್ತೋತ್ರವನ್ನು ಹೇಳಿ ನಮಸ್ಕರಿಸಬೇಕು.

ಶಿವನೇ ಸರ್ವೋತ್ತಮ, ಶ್ರೀಹರಿ ಬ್ರಹ್ಮ ಮುಂತಾದವರೆಲ್ಲ ಅವನ ಕಿಂಕರರು ಎಂದು ತಿಳಿದಿರುವ ಜನರಿಗೆ ಮಾತ್ರ ಶಿವರಾತ್ರಿಯಂದು ಉಪವಾಸ ಜಾಗರಗಳು.

ಶ್ರೀಹರಿಯೇ ಸರ್ವೋತ್ತಮ. ಬ್ರಹ್ಮದೇವರು ಅವನ ಮಗ. ರುದ್ರದೇವರು ಶ್ರೀಹರಿಯ ಮೊಮ್ಮಗ. ಬ್ರಹ್ಮ

ರುದ್ರಾದಿ ಸಮಸ್ತ ದೇವತೆಗಳಲ್ಲಿ ನಿಂತು ಸಕಲ ಕಾರ್ಯಗಳನ್ನು ಮಾಡಿಸುವ ಪರಬ್ರಹ್ಮ ಶ್ರೀಹರಿಯೇ ಎಂಬ ಸಕಲಶಾಸ್ತ್ರಗಳ ನಿರ್ಣೀತವಾದ ಪರಮಮಂಗಳ ತತ್ವವನ್ನು ತಿಳಿದು ಅನುಷ್ಠಾನ ಮಾಡುವ ವೈಷ್ಣವರು ಭಗವಂತನಿಗೆ ಅತ್ಯಂತ ಪ್ರಿಯರಾದ ರುದ್ರದೇವರು ಲೋಕಕಲ್ಯಾಣಕ್ಕಾಗಿ ಲಿಂಗದ ರೂಪದಲ್ಲಿ ಆವಿರ್ಭವಿಸಿದ ಈ ಸುದಿನವನ್ನು ಹಬ್ಬವನ್ನಾಗಿ ಆಚರಿಸಬೇಕು.

ಆ ಮನೋಭಿಮಾನಿಯ ಪರಮಾನುಗ್ರಹದಿಂದ ನಮ್ಮೆಲ್ಲರ ಮನಸ್ಸು ಸದಾ ಶ್ರೀಹರಿಯ ಚರಣಕಮಲದಲ್ಲಿ ಆಸಕ್ತವಾಗಿರಲಿ ಎಂಬ ಪ್ರಾರ್ಥನೆಯೊಂದಿಗೆ ಈ ಲೇಖವನ್ನು ಪಾರ್ವತೀಪತಿ ಶ್ರೀಕಂಠೇಶ್ವರನ ಅಂತರ್ಯಾಮಿ ಭಾರತೀಪತಿ ಮುಖ್ಯಪ್ರಾಣಪತಿ ಲಕ್ಷ್ಮೀಪತಿ ಶ್ರೀಮನ್ನಾರಾಯಣನಿಗೆ ಸಮರ್ಪಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ಶಿವಮಾಹಾತ್ಮ್ಯದ ಉಪನ್ಯಾಸಗಳ ಲಿಂಕುಗಳು

ಕೆಳಗಿನ ಯಾವುದೇ ಶಬ್ದಗಳನ್ನು ಒತ್ತಿದರೂ ಆಯಾ ಉಪನ್ಯಾಸವಿರುವ ಪುಟ ತೆರೆದುಕೊಳ್ಳುತ್ತದೆ.

## ಗಿರಿಜಾಕಲ್ಯಾಣ

### GK-01 ರುದ್ರದೇವರ ತಪಸ್ಸು

ಗಿರಿಜಾಕಲ್ಯಾಣಶ್ರವಣದಿಂದ ಉಂಟಾಗುವ ಫಲಗಳು, ರಾಮಚಂದ್ರನ ಧ್ಯಾನ ಮಾಡುತ್ತ ಕುಳಿತಿದ್ದ ರುದ್ರದೇವರ ತಪಸ್ಸಿನ ವರ್ಣನೆ, ಗಿರಿಜಾಕಲ್ಯಾಣದ ನಂತರ ಅವತರಿಸಿದ ರಾಮಚಂದ್ರನ ಧ್ಯಾನವನ್ನು ರುದ್ರದೇವರು ಹೇಗೆ ಮಾಡಲು ಸಾಧ್ಯ ಎಂಬ ಪ್ರಶ್ನೆಗೆ ಉತ್ತರದೊಂದಿಗೆ ದೇವತೆಗಳಿಗೆ ತಾರಕಾಸುರನ ಪೀಡೆಯುಂಟಾದ ಬಗೆ ಅದಕ್ಕಾಗಿ ಅವರು ಮಾಡಿದ ಪ್ರಯತ್ನಗಳನ್ನು ಇಲ್ಲಿ ವಿವರಿಸಲಾಗಿದೆ.

---

### GK-02 ಗಿರಿಜಾಪ್ರಾದುರ್ಭಾವ

ಮನುಷ್ಯಪ್ರಯತ್ನದ ಅನಿವಾರ್ಯತೆ, ಹಿಮವಂತನಲ್ಲಿ ದೇವತೆಗಳ ಪ್ರಾರ್ಥನೆ, ಮೇನಾ-ಹಿಮವಂತರ ಸಂವಾದ,

ಗಿರಿಜಾದೇವಿಯ ಪ್ರಾದುರ್ಭಾವ ಎಂಬ ನಾಲ್ಕು ವಿಷಯಗಳು ಈ ಉಪನ್ಯಾಸದಲ್ಲಿವೆ.

---

## GK-03 ಗಿರಿಜಾ-ಶಂಕರಸಂವಾದ

ಹಿಮವಂತ ಮತ್ತು ರುದ್ರದೇವರ ನಡುವಿನ ಸಂವಾದ, ಗಿರಿಜಾದೇವಿ ಮತ್ತು ರುದ್ರದೇವರ ನಡುವಿನ ಸಂವಾದ ಹಾಗೂ ರುದ್ರದೇವರು ಆಚರಿಸಿ ತೋರಿಸಿದ ಒಂದು ಮಹತ್ತ್ವದ ಧರ್ಮದ ಆಚರಣೆಯ ನಿರೂಪಣೆ ಇಲ್ಲಿದೆ.

---

## GK04 ಕಾಮದಹನ

ರುದ್ರದೇವರು ಕಾಮನನ್ನು ಸಂಹಾರ ಮಾಡಿದ ಘಟನೆಯ ವಿವರ ಇದೆ. ಕಾಮನನ್ನು ಸುಡಲು ಕಾರಣವೇನು ಎನ್ನುವ ಪ್ರಶ್ನೆಗೆ ಉತ್ತರವನ್ನು ನೀಡುವದರೊಂದಿಗೆ.

---

## GK-05 ರತೀದೇವಿ ಮಾಡಿದ ದಾಂಪತ್ಯಪ್ರದಾಯಕ ಸ್ತೋತ್ರ

ದೇವತೆಗಳಿಗೆ ಮರಣವಿಲ್ಲದ ಕಾರಣಕ್ಕೇ ಅಮರರು ಎಂದು ಕರೆಸಿಕೊಳ್ಳುತ್ತಾರೆ. ಅಂದಮೇಲೆ ದೇವೋತ್ತಮನಾದ

ಮನ್ಮಥನನ್ನು ರುದ್ರದೇವರು ಹೇಗೆ ಕೊಲ್ಲಲು ಸಾಧ್ಯ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ. ವೈಧವ್ಯ ಮತ್ತು ವೈಧುರ್ಯದ ದೋಷವನ್ನು ಪರಿಹಾರ ಮಾಡುವ ರುದ್ರದೇವರ ಸ್ತೋತ್ರದ ಅರ್ಥಾನುಸಂಧಾನದೊಂದಿಗೆ.

———————————————————————

## GK06 ರತೀದೇವಿಯ ಕರ್ಮ

ರತೀದೇವಿ ಯಾವ ತಪ್ಪು ಮಾಡಿದ್ದಳು? ಅವಳಿಗೇಕೆ ಪತಿವಿಯೋಗವುಂಟಾಯಿತು? ಕಾಮ ಪ್ರದ್ಯುಮ್ನನಾಗಿ ಹುಟ್ಟುವವರೆಗೆ ಅವಳ ಅವಸ್ಥೆ ಏನಿತ್ತು ಎಂಬೆಲ್ಲ ಪ್ರಶ್ನೆಗಳಿಗೆ ಶ್ರೀಮದಾಚಾರ್ಯರು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಉತ್ತರಗಳನ್ನು ನೀಡಿದ್ದಾರೆ. ಆ ಕಥೆಗಳ ನಿರೂಪಣೆ ಇಲ್ಲಿದೆ

———————————————————————

## GK07 ಪಾರ್ವತಿಯ ತಪಸ್ಸು

ಪಾರ್ವತೀದೇವಿ ಮಾಡಿದ ಅದ್ಭುತತಪಸ್ಸಿನ ವಿವರ ಇಲ್ಲಿದೆ.

———————————————————————

## GK08 ಪಾರ್ವತೀದೇವಿ ಕಲಿಸುವ ಪಾಠ

ಯಶಸ್ಸನ್ನು ಪಡೆಯಲು ಮನುಷ್ಯ ಮಾಡಬೇಕಾದ ಮಹಾಪ್ರಯತ್ನದ, ಅವನಿಗಿರಬೇಕಾದ ಮನಃಸ್ಥೈರ್ಯದ ಕುರಿತು ಪಾರ್ವತೀದೇವಿ ಕಲಿಸುವ ಅದ್ಭುತ ಪಾಠದ ವಿವರಣೆ ಇಲ್ಲಿದೆ.

———————————————————

## GK-09 ಗಿರಿಜೆಗೊಲಿದ ಶಂಕರ

ಪಾರ್ವತೀದೇವಿಯ ಶಿವಭಕ್ತಿಯನ್ನು ಪರೀಕ್ಷೆ ಮಾಡಿ ರುದ್ರದೇವರು ಗಿರಿಜೆಯ ಮೇಲೆ ಮಾಡುವ ಅನುಗ್ರಹದ ಚಿತ್ರಣ ಇಲ್ಲಿದೆ.

———————————————————

## GK-10 ಸಿದ್ಧಿಗಳಿಸಿದ ಪಾರ್ವತಿ

ಅದ್ಭುತ ತಪಸ್ಸನ್ನು ಮಾಡಿ ಸಿದ್ಧಿಗಳಿಸಿದ ಪ್ರೇಮದ ಮಗಳನ್ನು ಹಿಮ ಮೇನೆಯರು ಸಂಭ್ರಮದಿಂದ ತಮ್ಮ ಮನೆಗೆ ಕರೆದೊಯ್ಯುವ ಪ್ರಸಂಗದ ವಿವರಣೆ ಇಲ್ಲಿದೆ.

———————————————————

## GK-11 ಸಪ್ತರ್ಷಿಗಳಿಗೆ ಆಜ್ಞೆ

ಶಾಸ್ತ್ರೋಕ್ತವಾದ ಕ್ರಮದಲ್ಲಿಯೇ ಮದುವೆಯಾಗಬೇಕು ಎಂಬ ಪಾರ್ವತಿಯ ಅಪೇಕ್ಷೆಯಂತೆ, ಲೋಕದಲ್ಲಿ ಮತ್ತು ಶಾಸ್ತ್ರದಲ್ಲಿ ಯಾವ ರೀತಿಯ ಮದುವೆಯ ಕ್ರಮವಿದೆಯೋ ಅದೇ ಕ್ರಮವನ್ನು ರುದ್ರದೇವರು ಅನುಸರಿಸುತ್ತಾರೆ. ಮದುವೆಯ ಸಂಭ್ರಮದ ಭಾಗದ ವಿವರಣೆ ಇಲ್ಲಿದೆ.

---

## GK-12 ವರಪರೀಕ್ಷೆ

ಗಂಡಿನವರ ಕಡೆಯಿಂದ ಸಪ್ತರ್ಷಿಗಳು ಬಂದು ಕನ್ಯಾದರ್ಶನವನ್ನು ಮಾಡುತ್ತಾರೆ. ಹಿಮವಂತ ವರನ ಪರೀಕ್ಷೆಯನ್ನು ಮಾಡುತ್ತಾನೆ. ಶಂಕರನ ಕುರಿತು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಾನೆ. ಆ ಭಾಗದ ವಿವರಣೆ ಇಲ್ಲಿದೆ.

---

## GK-13 ವಧೂಪರೀಕ್ಷೆ

ಸಪ್ತರ್ಷಿಗಳು ಮಾಡಿದ ವಧೂಪರೀಕ್ಷೆಯ ವಿವರ ಇಲ್ಲಿದೆ. ಕೇಳಬಾರದ ಪ್ರಶ್ನೆಯೊಂದನ್ನು ಸಪ್ತರ್ಷಿಗಳು ಕೇಳಿದಾಗ ದಿಟ್ಟತನದಿಂದ ಗೌರೀದೇವಿಯರು ಉತ್ತರಿಸುತ್ತಾರೆ.

ಸಜ್ಜನರ ಜ್ಞಾನವೃದ್ಧಿಗಾಗಿ ನಡೆದ ಈ ಘಟನೆಯ ವಿವರ ಇಲ್ಲಿದೆ.

---

## GK-14 ಮದುವೆಗೆ ಬಂದ ಮಹಾದೇವ

ಸಮಸ್ತ ದೇವತೆಗಳ ಸಮೇತರಾಗಿ ರುದ್ರದೇವರು ಮದುವೆಯ ಮನೆಗೆ ಬರುತ್ತಾರೆ. ಹಿಮವಂತ ಎಲ್ಲರನ್ನೂ ಗೌರವದಿಂದ ಸ್ವಾಗತಿಸಿ, ತನ್ನ ಅಳಿಯನನ್ನು ಮೆರವಣಿಗೆಯಲ್ಲಿ ಬರಮಾಡಿಕೊಳ್ಳುತ್ತಾನೆ. ಆ ಸಂಭ್ರಮದ ಘಟನೆಗಳ ವಿವರ ಇಲ್ಲಿದೆ.

---

## GK-15 ಅಕ್ಷತಾರೋಪಣ

ಗೌರೀ ಶಂಕರರು ಪರಸ್ಪರ ಅಕ್ಷತಾರೋಪಣೆ ಮಾಡಿಕೊಂಡ ದಿವ್ಯಕ್ಷಣಗಳ ಚಿತ್ರಣ ಇಲ್ಲಿದೆ.

---

## GK-16 ಗಿರಿಜಾಕಲ್ಯಾಣ

ಜಗತ್ತಿನ ತಂದೆತಾಯಿಗಳ ಮದುವೆಯ ದಿವ್ಯಚಿತ್ರಣ. ಕೇಳಿಯೇ ಆನಂದಿಸಬೇಕಾದ ಭಾಗ.

# ತ್ರಿಪುರಾಸುರ ಸಂಹಾರ

## ತ್ರಿಪುರಾಸುರರಿಗೆ ವರ

“ದೇವತೆಗಳಿಗೆ ಬುದ್ಧಿಯಿಲ್ಲ, ತಾವೇ ರಾಕ್ಷಸರಿಗೆ ವರ ಕೊಡುತ್ತಾರೆ. ಆ ನಂತರ ಅದೇ ವರದಿಂದ ರಾಕ್ಷಸರು ದೇವತೆಗಳಿಗೆ ತೊಂದರೆ ಕೊಡುತ್ತಾರೆ. ಮತ್ತೆ ದೇವತೆಗಳು ಏನೋ ತಂತ್ರ ಮಾಡಿ ಅವರನ್ನು ಕೊಲ್ಲುತ್ತಾರೆ. ಒಟ್ಟಾರೆ ಈ ಪುರಾಣಗಳು ಕಾಗಕ್ಕ ಗುಬ್ಬಕ್ಕಗಳ ಕಟ್ಟು ಕಥೆ” ಎಂದು ಇಂದಿನವರು ಮಾಡುವ ಆಕ್ಷೇಪಕ್ಕೆ ಶ್ರೀಮದಾಚಾರ್ಯರ ಸಿದ್ಧಾಂತ ನೀಡಿರುವ ಯುಕ್ತಿಯುಕ್ತವಾದ ಅದ್ಭುತವಾದ ಉತ್ತರವನ್ನು ನಾವಿಲ್ಲಿ ಕೇಳುತ್ತೇವೆ. ಸಾಧನಜೀವನದ ಅದ್ಭುತ ಸಂವಿಧಾನದ ಚಿತ್ರಣದೊಂದಿಗೆ. ತಪ್ಪದೇ ಕೇಳಿ.

---

## ಪುರಗಳ ನಿರ್ಮಾಣ

ವರವನ್ನು ಪಡೆದ ತ್ರಿಪುರಾಸುರರು ಮಯಾಸುರನ ಬಳಿಗೆ ಬಂದು ಮೂರು ಊರುಗಳನ್ನು ನಿರ್ಮಾಣ ಮಾಡಲು ಹೇಳುತ್ತಾರೆ. ಮಯಾಸುರ ತಾನೂ ತಪಸ್ಸಿನ ಆಚರಣೆ ಮಾಡಿ ವಿಶೇಷ ಶಕ್ತಿಯನ್ನು ಗಳಿಸಿ ಬಂಗಾರ, ಬೆಳ್ಳಿ, ಕಬ್ಬಿಣಗಳ ಮೂರು ಅದ್ಭುತ ಊರುಗಳನ್ನು ನಿರ್ಮಾಣ ಮಾಡುತ್ತಾನೆ. ತಾರಕಾಕ್ಷನ ಮಗ ಹರಿ ಎನ್ನುವ ದೈತ್ಯ

ಬ್ರಹ್ಮದೇವರ ಕುರಿತು ತಪಸ್ಸು ಮಾಡಿ ಸತ್ತವರನ್ನು ಬದುಕಿಸುವ ಒಂದು ಕೆರೆಯನ್ನು ನಿರ್ಮಾಣ ಮಾಡುತ್ತಾನೆ. ಹೀಗೆ ಐಶ್ವರ್ಯ, ಶಕ್ತಿಗಳಿಂದ ಯುಕ್ತರಾದ ದೈತ್ಯರು ಸಜ್ಜನರನ್ನು ಹಿಂಸಿಸಲು ತೊಡಗಿದಾಗ ಇಂದ್ರದೇವರು ಅವರ ಮೇಲೆ ಯುದ್ಧ ಸಾರುತ್ತಾರೆ. ಆದರೆ ಬ್ರಹ್ಮದೇವರ ವರದ ರಕ್ಷೆಯಿದ್ದ ಅವರನ್ನು ಗೆಲ್ಲಲಾಗುವದಿಲ್ಲ. ನಂತರ ಬ್ರಹ್ಮದೇವರ ಆಜ್ಞೆಯಂತೆ ಸಮಸ್ತ ದೇವತೆಗಳೂ ಮಹಾರುದ್ರದೇವರ ಬಳಿ ಬಂದು ತ್ರಿಪುರಗಳ ಮತ್ತು ತ್ರಿಪುರಾಸುರರ ಸಂಹಾರಕ್ಕಾಗಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಈ ಘಟನೆಗಳ ಚಿತ್ರಣ ಈ ಭಾಗದಲ್ಲಿದೆ.

---

## ರಥದ ನಿರ್ಮಾಣ

ಬ್ರಹ್ಮದೇವರ ಆಜ್ಞೆಯಂತೆ ದೇವತೆಗಳೆಲ್ಲರೂ ರುದ್ರದೇವರನ್ನು ತ್ರಿಪುರಾಸುರರ ಸಂಹಾರಕ್ಕಾಗಿ ಪ್ರಾರ್ಥಿಸುತ್ತಾರೆ. ವಿಶ್ವಕರ್ಮ ದೇವತೆಗಳ ಅಪೇಕ್ಷೆಯಂತೆ ಸಮಸ್ತ ದೇವತಾಮಯವಾದ ಒಂದು ಅದ್ಭುತ ರಥವನ್ನು ರುದ್ರದೇವರಿಗಾಗಿ ನಿರ್ಮಾಣ ಮಾಡುತ್ತಾನೆ. ರುದ್ರದೇವರ ಶಿವ, ದೇವದೇವ, ಪಶುಪತಿ ಮುಂತಾದ ಹೆಸರಿನ ಅರ್ಥಗಳ ವಿವರಣೆ ಹಾಗೂ ರುದ್ರರಥದ ವೈಭವವನ್ನು ಈ ಭಾಗದಲ್ಲಿ ಕೇಳುತ್ತೇವೆ.

# ರುದ್ರವಿಜಯ

ದೇವತೆಗಳ ಪ್ರಾರ್ಥನೆಗೆ ಓಗೊಟ್ಟ ಕಾರುಣ್ಯದ ಬ್ರಹ್ಮದೇವರು ರುದ್ರದೇವರ ರಥದ ಸಾರಥ್ಯವನ್ನು ಮಾಡಲು ಒಪ್ಪುತ್ತಾರೆ. ಸಮಸ್ತದೇವತಾಮಯವಾದ ವೇದಮಯವಾದ ಆ ರಥಕ್ಕೆ ಸಾರಥಿಯಾಗಿ ಜಗತ್ತಿನ ಪಿತಾಮಹನಿರಲು ಆ ಪಾರ್ವತೀಪತಿ ರಥವನ್ನೇರಿ ತ್ರಿಪುರಗಳನ್ನು ಆ ಪುರಗಳಲ್ಲಿದ್ದ ತ್ರಿಪುರಾಸುರರನ್ನು, ಅಸಂಖ್ಯ ರಾಕ್ಷಸರನ್ನೂ ಸಂಹಾರ ಮಾಡುತ್ತಾರೆ. ಆ ಪರಮಪವಿತ್ರ ರುದ್ರವಿಜಯದ ನಿರೂಪಣೆ ಈ ಭಾಗದಲ್ಲಿದೆ, ತ್ರಿಪುರಾಸುರಸಂಹಾರದ ಶ್ರವಣದಲ್ಲಿ ನಮಗಿರಬೇಕಾದ ಅನುಸಂಧಾನದ ವಿವರಣೆಯೊಂದಿಗೆ.

# ಶಿವಸ್ತುತಿ

## ಶಿವಸ್ತುತಿ

ಕಲಿಯಲಿಕ್ಕೆ ಮತ್ತು ಪಾರಾಯಣ ಮಾಡಲಿಕ್ಕೆ ಅನುಕೂಲವಾಗುವಂತೆ ಶ್ರೀ ನಾರಾಯಣಪಂಡಿತಾಚಾರ್ಯರು ರಚಿಸಿರುವ ಶ್ರೀ ಶಿವಸ್ತುತಿಯ ಪಠಣ ಇಲ್ಲಿದೆ.

---

ಪಾರಾಯಣಕ್ಕೆ ಅನುಕೂಲವಾಗುವಂತೆ ಶ್ರೀ ನಾರಾಯಣಪಂಡಿತಾಚಾರ್ಯರು ರಚಿಸಿರುವ ಶ್ರೀ ಶಿವಸ್ತುತಿ ಕನ್ನಡ ಮತ್ತು ಸಂಸ್ಕೃತ ಎರಡೂ ಲಿಪಿಗಳಲ್ಲಿ ಇಲ್ಲಿದೆ.



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491